ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬೆಂಗಳೂರು ಸೋಮವಾರ ದಿನೇ ಮೇ ೧೯೮೮ ವೈಶಾಖ ೧೯, ೧೯೧೦ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್)ರವರು ಪೀಠವನ್ನಲಂಕರಿಸಿದರು.]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಮೈಸೂರು ವಿಶ್ವವಿದ್ಯಾನಿಲಯದ ಹಂಗಾಮಿ ಅಧ್ಯಾಪಕರುಗಳ ಬಗ್ಗೆ

೧೩೦೭ ಶ್ರೀ ಬಿ.ಎಂ. ಚಿಕ್ಕಬೋರಯ್ಯ (ಚಾಮರಾಜ).— ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ಕರ್ನಾಟಕ ವಿಶ್ವವಿದ್ಯಾನಿಲಯದ ೧೯೭೬ನೇ ಕಾಯಿದೆ ಅಂದಿನ ಅಧಿವೇಶನದಲ್ಲಿ ಹಂಗಾಮಿ ಅಧ್ಯಾಪಕರನ್ನು ಖಾಯಂಗೊಳಿಸುವ ತಿದ್ದುಪಡಿಯಾಗಿ ಅದನ್ನು ಜಾರಿಗೆ ಕೊಟ್ಟ ನಂತರ ಮೈಸೂರು ವಿಶ್ವವಿದ್ಯಾನಿಲಯ ಎಷ್ಟು ಉಪಾಧ್ಯಾಯರುಗಳನ್ನು ಖಾಯಂಗೊಳಿಸಿದೆ?

೨) ಹಂಗಾಮಿ ಉಪಾಧ್ಯಾಯರ ಸಂಖ್ಯೆ ೧-೪-೮೪ರಲ್ಲಿ ಎಷ್ಟಿತ್ತು. ಹಾಗೂ ಹಾಲಿ ಎಷ್ಟು ಜನ ಕೆಲಸದಲ್ಲಿದ್ದಾರೆ? ಉಳಿದವರನ್ನು ಯಾವಾಗ ಕೆಲಸದಿಂದ ತೆಗೆಯಲಾಯಿತು?

೩) ಒಂದು ವೇಳೆ ಆ ರೀತಿ ಖಾಯಂ ಮಾಡದಿದ್ದಲ್ಲಿ ಸರ್ಕಾರ ಅವರಿಗೆ ಪರಿಹಾರ ದೊರಕಿಸಲು ಏನಾದರೂ ಕ್ರಮ ತೆಗೆದುಕೊಂಡಿದೆಯೇ?

೪) ಈಗಾಗಲೇ ೫ ಅಥವಾ ೬ ವರ್ಷಗಳ ಕಾಲ ಕೆಲಸದಲ್ಲಿದ್ದು, ದಿನಾಂಕ ೧-೪-೧೯೮೪ರಿಂದ ೩೧-೩-೧೯೮೬ರ ಒಳಗೆ ಕೆಲಸದಿಂದ ತೆಗೆದು ಹಾಕಿದ ಹಂಗಾಮಿ ಉಪಾಧ್ಯಾಯರಿಗೆ ಉದ್ಯೋಗ ಒದಗಿಸಲು ಯಾವುದಾದರೂ ಯೋಜನೆಯನ್ನು ಕೈಗೊಂಡಿದೆಯೆ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

೧) ಇನ್ನೂ ಖಾಯಂ ಗೊಳಿಸಿಲ್ಲ.

೨) ೧-೪-೧೯೮೪ರಲ್ಲಿ ಇದ್ದ ಹಂಗಾಮಿ ಅಧ್ಯಾಪಕರುಗಳ ಸಂಖ್ಯೆ. ೪೨, ಈಗ ಕೆಲಸದಲ್ಲಿ ೧೭ ಜನ ಇದ್ದಾರೆ. ಉಳಿದ ೨೫ ಜನರನ್ನು ೧೯೮೫ರಿಂದ ೧೯೮೭ರ ಅವಧಿಯಲ್ಲಿ ತೆಗೆಯಲಾಯಿತು.

೩) ಈ ಬಗ್ಗೆ ವಿಶ್ವವಿದ್ಯಾನಿಲಯದಿಂದ ಪ್ರಸ್ತಾವನೆ ಬಂದ ನಂತರ ಸರ್ಕಾರವು ಪರಿಶೀಲಿಸಲಾಗುವುದು.

೪) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ತಿದ್ದುಪಡಿಯಾಗಿರುವ ಪ್ರಕಾರ ವಿದ್ಯಾರ್ಹತೆಗಳನ್ನು ಪರಿಶೀಲಿಸಿ ಅರ್ಹತಾ ಅಭ್ಯರ್ಥಿಗಳನ್ನು ಸದರಿ ಕಾಯ್ದೆಯ ಮೇರೆಗೆ ಖಾಯಂ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಪಿ. ಎಂ, ಚಿಕ್ಕಬೋರಯ್ಯ.— ಮಾನ್ಯ ಅಧ್ಯಕ್ಷರೆ, ಮೊದಲನೇ ನನ್ನ ಪ್ರಶ್ನೆ ಇಷ್ಟೆ. ಇದಕ್ಕೆ ತಿದ್ದುಪಡಿ ಮಾಡಿದಾಗ ಒಂದು ಪ್ರಾವಿಷೋ ಸೇರಿಸಿದೆ. ಅದರ ಪ್ರಕಾರ ೧-೪-೧೯೮೪ರಿಂದ ೩೧-೩-೧೯೮೬ರ ವರೆಗೆ ಯಾರು ಯಾರನ್ನು ತೆಗೆದುಹಾಕಲ್ಪಟ್ಟಿತ್ತೋ ಅವರನ್ನು ಪುನಃ ನೇಮಕ

ಮಾಡುವ ಅಥವಾ ಖಾಯಂ ಮಾಡುವ ಸಂಭವ ಇಲ್ಲ ಎಂದು ಆ ಪ್ರಾವಿಷೋನಲ್ಲಿ ಇರುವುದರಿಂದ ಈ ರೀತಿಯ ಅಧ್ಯಾನಕ್ಕೆ ಅವಕಾಶ ಕೊಟ್ಟಿದೆ ಸುಮಾರು ೨೨ ಕುಟುಂಬಗಳು ಇವೊತ್ತು ಬೀದಿಪಾಲಾಗಿವೆ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕೆಂದು ಕೋರುತ್ತಿದ್ದೇನೆ. ಎರಡನೆಯ ಪ್ರಶ್ನೆ ಕರೆಸ್ಪಾಂಡೆನ್ಸ್ ಕೋರ್ಸ್‌ನಲ್ಲಿ ಟ್ಯೂಟರ್ಸ್ ಹುದ್ದೆಗಳನ್ನು ಲೆಕ್ಚರರ್ ಆಗಿ ಪರಿವರ್ತನೆ ಮಾಡಿ ಅದಕ್ಕೆ ಅವರನ್ನು ನೇಮಕ ಮಾಡಿ ಖಾಯಂಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ದಯವಿಟ್ಟು ಮಾನ್ಯ ಮಂತ್ರಿಗಳು ಈ ಬಗ್ಗೆ ಉತ್ತರ ಕೊಡಬೇಕೆಂದು ಕೋರುತ್ತಿದ್ದೇನೆ.

ಶ್ರೀ ಜೀವರಾಜ ಆಳ್ವ,— ಅಧ್ಯಕ್ಷರೇ, ಮಾನ್ಯ ಸದಸ್ಯರ ಎರಡನೆಯ ಪ್ರಶ್ನೆಗೆ ಅವರು ಬೇರೆ ಪ್ರಶ್ನೆ ಕೇಳಬೇಕಾಗುತ್ತದೆ. ಮೊದಲನೆಯ ಪ್ರಶ್ನೆಗೆ ಉತ್ತರ ಈ ಪರಿಸ್ಥಿತಿ ಬರೀ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮಾತ್ರ ಸೇರುತ್ತದೆ. ಏಕೆಂದರೆ ಉಳಿದ ವಿಶ್ವವಿದ್ಯಾನಿಲಯಗಳು ನಾವು ಲೆಜಿಸ್ಲೇಷನ್ ಪಾಸ್ ಮಾಡಿದ್ದೆವು ಅದನ್ನು ಒಪ್ಪಿಕೊಂಡಿವೆ. ೭ನೇ ತಾರೀಖಿನ ಸಿಂಡಿಕೇಟ್ ಕಮಿಟಿ ಮೀಟಿಂಗ್ ಆಗಿದೆ, ಫೈನಾನ್ಸ್ ಕಮಿಟಿಯವರು ಒಪ್ಪಿದ್ದಾರೆ. ಕಟ್ ಆಫ್ ಡೇಟನ್ನು ಸಜೆಸ್ಟ್ ಮಾಡಿದವರೇ ವಿಶ್ವವಿದ್ಯಾನಿಲಯದ ಅಧ್ಯಾಪಕರ ಸಂಘದವರು. ಅವರ ಜೊತೆ ಚರ್ಚೆ ಮಾಡಿ ಕಟ್ ಆಫ್ ಡೇಟ್ ತೀರ್ಮಾನ ಮಾಡಿದೆ. ಆದರಿಂದ ಕೆಲವು ಉಪಾಧ್ಯಾಯರಿಗೆ ತೊಂದರೆಯಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ ಅದರ ಬಗ್ಗೆ ಸರ್ಕಾರ ಮತ್ತು ವಿಧಾನ ಸಭೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಚಿಕ್ಕಬೋರಯ್ಯ.— ೧೯೬೫ನೇ ಇಸವಿಯಲ್ಲಿ ೨೨ ಜನರನ್ನು ಏನು ತೆಗೆದಿದ್ದಾರೋ ಅವರನ್ನು ಖಾಯಂಗೊಳಿಸುವುದಕ್ಕೆ ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳುತ್ತದೆಯೇ ಎಂಬ ಪ್ರಶ್ನೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ದಯವಿಟ್ಟು ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು

ಶ್ರೀ ಜೀವರಾಜ ಆಳ್ವ,— ಅದನ್ನು ಸರ್ಕಾರ ಪರಿಶೀಲನೆ ಮಾಡಬೇಕಾಗುತ್ತದೆ.

ಅಧ್ಯಕ್ಷರು.— ಮುಂದಿನ ಪ್ರಶ್ನೆ ಕೆ.ಜೆ. ಜಾರ್ಜ್ ಅವರು.

ಶ್ರೀ ಜೀವರಾಜ ಆಳ್ವ.— ಮಾನ್ಯ ಸದಸ್ಯರಾದ ಜಾರ್ಜ್ ಅವರು ಬಂದಿಲ್ಲ,

ಅಧ್ಯಕ್ಷರು,— ಹಾಗಾದರೆ ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

ಕೊಳ್ಳೇಗಾಲ ತಾಲ್ಲೂಕಿನಲ್ಲಿ ನೀರಾವರಿಗಾಗಿ ಮಾಡಿದ ವೆಚ್ಚದ ಬಗ್ಗೆ.

೧೧೧೭. ಶ್ರೀ ಜಿ. ರಾಜುಗೌಡ (ಹನೂರು).— ಮಾನ್ಯ ಕಂದಾಯ ಯೋಜನೆ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೬೪ರಿಂದ ಇಲ್ಲಿಯವರೆಗೆ ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಸಣ್ಣ ಏತ, ಮಧ್ಯಮ ನೀರಾವರಿ ಹಾಗೂ ಗಂಗಾಕಲ್ಯಾಣಕ್ಕಾಗಿ ವೆಚ್ಚ ಮಾಡಿರುವ ಪೂರ್ತವೆಷ್ಟು?

ಆ) ಈ ಯೋಜನೆಗಳಿಂದ ಎಷ್ಟು ಹೆಕ್ಟೇರ್ ಜಮೀನಿಗೆ ನೀರಾವರಿ ಆಗುತ್ತಲಿದೆ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಸಚಿವರು).—

ಅ) ಒಟ್ಟು ೧೦೭.೯೦ ಲಕ್ಷ ರೂ.ಗಳು.

ಆ) ೨೫೭೭ ಹೆಕ್ಟೇರುಗಳು.

ಶ್ರೀ ಜಿ. ರಾಜುಗೌಡ.—ನನ್ನ ಪ್ರಶ್ನೆ ಏನೆಂದರೆ ಯಾವ ಯಾವ ಯೋಜನೆಯಲ್ಲಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎನ್ನುವ ವಿವರಗಳು ಬೇಕು. ಹಾಗೂ ಯಾವ ಯಾವ ಯೋಜನೆಯ ಅಡಿಯಲ್ಲಿ ಎಷ್ಟೆಷ್ಟು ಎಕರೆ ನೀರಾವರಿಯಾಗಿದೆ ಎನ್ನುವದು ನನ್ನ ಪ್ರಶ್ನೆ. ಒಟ್ಟು ೧೦೭.೯೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದರೆ ಹೇಗೆ ? ಪ್ರತಿಯೊಂದು ಯೋಜನೆಯಲ್ಲೂ ಅಂದರೆ, ಸಣ್ಣ ನೀರಾವರಿಯಲ್ಲಿ ಖರ್ಚು ಮಾಡಿರುವ ಹಣವೆಷ್ಟು ? ಮಧ್ಯಮ ನೀರಾವರಿಯಲ್ಲಿ ಖರ್ಚು ಮಾಡಿರುವ ಹಣವೆಷ್ಟು ? ಏತ ನೀರಾವರಿ ಯೋಜನೆಯಲ್ಲಿ ಖರ್ಚು ಮಾಡಿರುವ ಹಣವೆಷ್ಟು ಎಂಬುದನ್ನು ಪ್ರತ್ಯೇಕವಾಗಿ ಹೇಳಿ. ಏಕೆಂದರೆ ಸುಳ್ಳು ಮಾಹಿತಿಯನ್ನು ಅಧಿಕಾರಿಗಳು ತಮಗೆ ಓದಗಿಸಿದ್ದಾರೆ.